ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ಕೆಲಸಗಾರರು ಮತ್ತು ನೈಪಂಡಿಯರಿ ಪಥವಿಧರ ಸಮಸ್ಯೆಯೇ ಸರ್ಕಾರಕ್ಕೆ ಭಾರೀ ಸಮಸ್ಯೆಯಾಗಿರುವುದರಿಂದ ನಿರುದ್ಯೋಗಿ ಪಥವೀಧರರ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿಯಿದ್ದರೂ ಸಹ ವಿಕಕಾಲದಲ್ಲಿ ಎಲ್ಲಾ ನಿರುದ್ಯೋಗಿ ಪಥವೀಧರರಿಗೆ ಸರ್ಕಾರದ ಇಲಾಖೆಗಳಲ್ಲಿ ಹುದ್ದೆಗಳನ್ನು ಒದಗಿಸಲು ಸಾಧ್ಯವಾಗಲಾರದು.

ಆದುದರಿಂದ ನಿರುದ್ಯೋಗಿ ಪಥವೀಧರರು ಸ್ವಯಂ ಉದ್ಯೋಗವನ್ನು ಸ್ಥಾಪಿಸಲು ಸರ್ಕಾರವು ಕಲ್ಪಿಸಿರುವ ಹಲವಾರು ಪ್ರಯೋಜನಗಳ ನೆರವನ್ನು ಪಡೆದು ಸ್ವಾವಲಂಬಿಗಳಾಗಿ ಉನ್ನತ ಜೀವನವನ್ನು ಸಾಗಿಸಲು ಕಲಿಯಬೇಕು.

(೯) ಮಂಗಳೂರಿನಲ್ಲಿ ತೈಲ ಸಂಸ್ಕರಣಾಗಾರ ಮತ್ತು ಪೆಟ್ರೋ ಕೆಮಿಕಲ್ ಕಾಂಪ್ಲೆಕ್ಸ್‌ನ್ನು ಸ್ಥಾಪಿಸುವುದು

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ರಾಜ್ಯದ ಜನತೆಯು ಬಹುಕಾಲದ ಈ ಬೇಡಿಕೆಗೆ ಮಾನ್ಯತೆ ನೀಡಿ ಮಂಗಳೂರಿನಲ್ಲಿ ತೈಲ ಸಂಸ್ಕರಣಾಗಾರ ಮತ್ತು ಪೆಟ್ರೋ ಕೆಮಿಕಲ್ ಕಾಂಪ್ಲೆಕ್ಸ್ ಸ್ಥಾಪಿಸಲು ಮಂಜೂರಾತಿ ದೊರೆತಿರುವುದಾಗಿ ಕೇಂದ್ರಸರ್ಕಾರದ ಮಾನ್ಯ ಸಹಾಯಕ ವಿತ್ತ ಮಂತ್ರಿಯವರು ಪ್ರಕಟಿಸಿರುವುದು ಪತ್ರಿಕೆಗಳಲ್ಲಿ ವರದಿ ಆಗಿದೆ. ಆವಶ್ಯಕವುಳ್ಳ ಸ್ಥಳವನ್ನು ರಾಜ್ಯಸರ್ಕಾರ ಒದಗಿಸಿದ ನಂತರ ಈ ಹೊಸ ಉದ್ದಿಮೆಗಳು ಸ್ಥಾಪನೆ ಆಗಬೇಕಾಗಿರುವುದರಿಂದ ಬೇಕಾದ ಜಾಗ ನೀಡಲು ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಯಬಯಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಈ ಬಗ್ಗೆ ನಾಳೆ ಹೇಳುತ್ತೇನೆ.

(೧೦) ರಾಜ್ಯದಲ್ಲಿ ನಡೆಯುತ್ತಿರುವ ದರೋಡೆಗಳ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್.—ಕಳೆದ ಒಂದು ವಾರದಿಂದ ಪ್ರತಿದಿನ ಪತ್ರಿಕೆಗಳಲ್ಲಿ ಡಕಾಯಿತಿಗಳ, ದರೋಡೆಕೋರರ ಕಳ್ಳತನಗಳ ಬಗ್ಗೆ ವರದಿಗಳು ಪ್ರಕಟವಾಗಿವೆ. ಹಾಗೂ ಬೆಂಗಳೂರು ಮತ್ತು ಬಳ್ಳಾರಿಗಳಲ್ಲಿ ದರೋಡೆಕೋರರ ಹಾವಳಿ ಹೆಚ್ಚಾಗಿದೆ. ಅನೇಕರನ್ನು ತೀಪ್ರವಾಗಿ ಗಾಯಗೊಳಿಸಿದ್ದಾರೆ. ಮಕ್ಕಳು, ಹೆಂಗಸರನ್ನು ಬಿಡದು ಇದ್ದುದ್ದನ್ನೆಲ್ಲಾ ದೋಚಿಕೊಂಡು ಹೋಗುತ್ತಿದ್ದಾರೆ. ಸರ್ಕಾರದ ಪೋಲೀಸ್ ಇಲಾಖೆ ಇದನ್ನು ಕಂಡುಹಿಡಿಯಲು, ಮಟ್ಟಹಾಕಲು ವೈಫಲ್ಯತೆ ತೋರಿದೆ. ಪರಿಸ್ಥಿತಿ ಹದಗೆಡುತ್ತಿರುವುದರಿಂದ, ಸರ್ಕಾರದ ಹೇಳಿಕೆ ಅತ್ಯಗತ್ಯ. ಗೃಹಸಚಿವರು ಇದರ ಬಗ್ಗೆ ಹೇಳಿಕೆ ನೀಡ ಬೇಕಾಗಿ ವಿನಂತಿ. (ಇಂದಿನ, ನಿನ್ನೆಯ ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ ಪತ್ರಿಕೆಗಳಲ್ಲಿ ಕೆಲವು ಘಟನೆಗಳ ಬಗ್ಗೆ ವರದಿಯಾಗಿದೆ.)

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ವಿಚಾರವನ್ನು ಗೃಹಸಚಿವರ ಗಮನಕ್ಕೆ ತಂದು ಹೇಳಿಕೆ ಕೊಡಲಿಕ್ಕೆ ತಿಳಿಸುತ್ತೇನೆ.

(೧೧) ಮಡಿಕೇರಿ ನಗರದಲ್ಲಿ ಗೃಹ ನಿರ್ಮಾಣ ಮಂಡಲಿಯವರು ಕಟ್ಟಿಸಿರುವ ಮನೆಗಳು

ಶ್ರೀಮತಿ ಸುಮಾವಸಂತ.—ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ಮಡಿಕೇರಿ ನಗರದಿಂದ ಎರಡು ಮೈಲಿ ದೂರದ ಪ್ರದೇಶದಲ್ಲಿ ಸುಮಾರು ೭ ಲಕ್ಷದ ೨೦ ಸಾವಿರ ರೂಪಾಯಿಗಳ ವೆಚ್ಚದಲ್ಲಿ ೭೦ ಮನೆಗಳನ್ನು ನಿರ್ಮಿಸಿದೆ. ಈ ಮನೆಗಳನ್ನು ಮಧ್ಯಮವರ್ಗ, ಅಲ್ಪ ವರಮಾನ, ಕನಿಷ್ಟ ವರಮಾನ ದವರಿಗಾಗಿ ನಿರ್ಮಿಸಲಾಗಿದ್ದು, ನಿರ್ಮಾಣದ ಕಾರ್ಯ ಮುಗಿದು, ಇಲ್ಲಿಗೆ ಸಾಲ್ಕು ವರ್ಷಗಳು ಕಳೆದಿದ್ದರೂ, ಸಹ ಮನೆ ಬೇಕೆಂದು ಕೇಳಿ ಕೇಡ ೨೫ರಷ್ಟು ಹಣ ಮುಂಗಡ ಕಟ್ಟಿ ಕಾಯುತ್ತಿರುವ ೫೦ ಮಂದಿಗೆ ಇದುವರೆಗೆ ಮನೆ ಬಿಟ್ಟುಕೊಟ್ಟಿಲ್ಲ. ಕಟ್ಟಿರುವ ಈ ಮನೆಗಳಿಗೆ ಕಳಪೆ ದರ್ಜೆ ಸಾಮಗ್ರಿಗಳನ್ನು ಬಳಸಿದ್ದು, ಇದುವರೆಗೆ ಈ ಮನೆಗಳಿಗೆ ನೀರು, ಮತ್ತು ವಿದ್ಯುತ್ ಸೌಲಭ್ಯಗಳನ್ನು ಒಳಪಡಿಸಿರುವುದಿಲ್ಲ. ಈ ವಿಳಂಬದಿಂದಾಗಿ ೧೯೬೫ರಲ್ಲಿ ೭೫ ಸಾವಿರ ರೂಪಾಯಿಗಳು ಕ್ರಯವಿದ್ದ ಮಧ್ಯಮ ವರ್ಗದ ಮನೆಗಳಿಗೆ ೧೯೮೭ಕ್ಕೆ ೯೦ ಸಾವಿರದಿಂದ ಒಂದು ಲಕ್ಷ ರೂಪಾಯಿಗಳಿಗೆ ಏರಿದೆ. ಇದೇ ರೀತಿ ಅಲ್ಪ ವರಮಾನದವರಿಗೆ ನಿರ್ಮಿಸಿರುವ ಮನೆಗಳ ವೆಚ್ಚ ೪೮ ಸಾವಿರ, ಕನಿಷ್ಟ ವರಮಾನದವರು ಮನೆಗಳಿಗೆ ೩೫ ರಿಂದ ೩೫ ಸಾವಿರ ರೂಪಾಯಿಗಳು ಹೆಚ್ಚಿರುತ್ತದೆ. ಇದರಿಂದ ಗೃಹ ಮಂಡಲಿಯ ಮೂಲ ಉದ್ದೇಶಕ್ಕೆ ಭಂಗ ಬಂದಿದ್ದೇ ಅಲ್ಲದೆ, ಕಡಿಮೆ ವೆಚ್ಚಕ್ಕೆ ದೊರೆಯಬೇಕಾದ ಮನೆಗಳ ವೆಚ್ಚ ಹೆಚ್ಚು ಬಡವರಿಗೆ ಹೊರೆಯಾಗಿವೆ, ಆಷ್ಟೇ

ಅಲ್ಲದೆ ಅವರುಗಳಿಗೆ ಸಕಾಲಕ್ಕೆ ಮನೆಗಳು ಸಿಕ್ಕಿಲ್ಲ. ಆದ್ದರಿಂದ ಈ ಮನೆಗಳಿಗೆ ಅಗತ್ಯ ಸೌಲಭ್ಯಗಳನ್ನು ಕಟ್ಟಿಸಿ, ಹೆಚ್ಚಿರುವ ಮನೆಗಳ ವೆಚ್ಚವನ್ನು ಕಡಿಮೆ ಮಾಡಿ ಈ ಮನೆಗಳನ್ನು ಉದ್ದೇಶಿತ ಮಧ್ಯಮ ವರ್ಗ, ಅಲ್ಪ ವರಮಾನದ ವರ್ಗ ಮತ್ತು ಕನಿಷ್ಟ ವರಮಾನದ ವರ್ಗದವರಿಗೆ ಕೊಡಿಸಿಕೊಡಬೇಕೆಂದೂ, ಈ ವಿಳಂಬಕ್ಕೆ ಕಾರಣರಾದವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ಮನೆಗಳನ್ನು ಪೂರ್ಣ ಆಗದೆ ಯಾರಿಗೂ ವಹಿಸಲಿಕ್ಕೆ ಆಗುವುದಿಲ್ಲ. ನೀರನ್ನು ಕೊಡತಕ್ಕದ್ದು, ವಿದ್ಯುಚ್ಛಕ್ತಿ ಕೊಡತಕ್ಕದ್ದು, ಇವೆರಡನ್ನೂ ಕರ್ನಾಟಕ ನೀರಾವರಿ ಸರಬರಾಜು ಮಂಡಳಿ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಪಾವತಿ ಮಾಡ ಬೇಕಾಗುತ್ತದೆ. ಈಗ ನಿಧಾನವಾಗಿರುವುದನ್ನು ನಾನು ಒಪ್ಪುವುದೇನೆ ಆದ್ದರಿಂದ, ಈ ಬಗ್ಗೆ ಜನರಿಗೆ ಹೆಚ್ಚಿನ ಕಂತುಗಳ ಮೂಲಕ ಹಣ ಕಟ್ಟಲಿಕ್ಕೆ ಅವಕಾಶ ಕೊಡಬೇಕೆಂದು ಆದೇಶ ಕೊಟ್ಟಿದ್ದೇನೆ. ಪೂರಕವಾದ ವ್ಯವಸ್ಥೆ ನಿಧಾನವಾಗಿರುವ ಬಗ್ಗೆ ಆದೇಶ ಕೊಟ್ಟಿದ್ದೇನೆ. ಮೂರು ಸಾವಿರ ಮನೆಗಳನ್ನು ಹಂಚಬೇಕಾಗಿದೆ. ನಿರ್ದಿಷ್ಟ ಕಾಲಾವಧಿಯಲ್ಲಿ ಮನೆ ಕೊಡಬೇಕೆಂದು ತಿಳಿಸಿದ್ದೇವೆ.

(೧೨) ರಾಜ್ಯದ ಶಿಕ್ಷಕರ ಜಿಲ್ಲಾ ವರ್ಗಾವಣೆ

SMT. MUKHTARUNNISA.—The Karnataka St te inter district transfer of Primary School Teacher's Association is urging that the transfer of Primary Schools from one district to another. This is because of the fact that the services of the teachers put in the district, in which they are staying are being considered for promotion as Head Masters. They are also urging that the whole service has to be taken into account while considering for promotion. It is ascertained that the Govt. have not considered their request. I urge the Govt. to consider the entire service put in by the teachers for Promotion to the post of He d Master and retain in the same place, such of those who are to retire shortly.

ಶ್ರೀ ಡಿ. ಮಂಜುನಾಥ್.—ಈಗ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ವರ್ಗ ಆದರೆ ಪ್ರೈಮರಿ ಸ್ಕೂಲಿನಲ್ಲಿರುವ ಉಪಾಧ್ಯಾಯರ ಸೀನಿಯಾರಿಟಿ ಕೆಳಗಡೆ ಹೋಗುತ್ತದೆ. ಪ್ರತಿಯೊಂದು ಜಿಲ್ಲೆಗೆ ಘಟಕ ಎಂದು ಮಾಡಿದ್ದೇವೆ. ಡಿ.ಎಲ್.ಆರ್.ಸಿ. ಮೂಲಕ ಈ ಜಿಲ್ಲೆಗೆ ಎಂದು ರೆಕ್ರೂಟ್‌ಮೆಂಟ್ ಮಾಡಿರುತ್ತೇವೆ. ನಿಯಮಾವಳಿಯ ಪ್ರಕಾರ ಹೋದರೆ ಅವರ ಸೀನಿಯಾರಿಟಿ ಕೆಳಗೆ ಹೋಗುತ್ತದೆ. ಈಗ ನಾವು ಪ್ರೈಮರಿ ಸ್ಕೂಲು ಟೀಚರ್ಸ್‌ಗೆ ಪ್ರೊಮೋಷನ್ ಕೊಡುತ್ತಿದ್ದೇನೆ. ಕೆಲವರು ವರ್ಗವಾಗಿ ಬೇರೆ ಜಿಲ್ಲೆಗಳಿಗೆ ಹೋಗಿದ್ದಾರೆ. ಈ ರೀತಿ ಬೇರೆ ಜಿಲ್ಲೆಗಳಿಗೆ ಹೋದವರಿಗೆ ಪಿಕ್ಕುತ್ತಿಲ್ಲ. ಈಗಿರತಕ್ಕ ನಿಯಮಾವಳಿ ಪ್ರಕಾರ ಇದು ಸರಿಯಿಲ್ಲ.

(೧೩) ಆರೋಗ್ಯ ಇಲಾಖೆಯಲ್ಲಿರುವ ಅಸಿಸ್ಟೆಂಟ್ ಸರ್ಜನ್‌ಗಳನ್ನು ಡೆಪ್ಯೂಟಿ ಸರ್ಜನ್‌ಗಳಾಗಿ ಭಡ್ತಿ ಕೊಡುವುದು

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೆ. ಆರೋಗ್ಯ ಇಲಾಖೆಯಲ್ಲಿ ಅಸಿಸ್ಟೆಂಟ್ ಸರ್ಜನ್ ಆಗಿ ಒಹಳ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವವರುಗಳಿಗೆ ಪ್ರೊಮೋಷನ್ ಕೊಟ್ಟು ಖಾಲಿ ಇರುವ ಡೆಪ್ಯುಟಿ ಸರ್ಜನ್‌ಗಳ ಸ್ಥಾನವನ್ನಲ್ಲಿ ನೇಮಕ ಮಾಡಬೇಕಾಗಿದೆ. ಆದರೆ ಸರ್ಕಾರ ಪ್ರೊಮೋಷನ್ ನಿಯಮಾವಳಿಯನ್ನು ಮರೆತು ನಿಧಾನಿಸುತ್ತಿರಲು ಕಾರಣವೇನು ? ಈ ರೀತಿ ಪ್ರೊಮೋಷನ್ ತಡೆ ಹಿಡಿದು ವಿಳಂಬ ಮಾಡಿದಲ್ಲಿ ಅಧಿಕಾರಿಗಳಲ್ಲಿ ಆದಕ್ಷತೆಗೆ ಅವಕಾಶ ಮಾಡಿಕೊಡುವುದಿಲ್ಲವೆ ? ಆದ್ದರಿಂದ ಈಗ ಅಸಿಸ್ಟೆಂಟ್ ಸರ್ಜನ್‌ಗಳಾಗಿ ಪ್ರೊಮೋಷನ್ ಕೊಟ್ಟು ಅಧಿಕಾರಿಗಳ ದಕ್ಷತೆ ಹೆಚ್ಚಿಸಬೇಕಾಗಿ ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ. ಪ್ರೊಮೋಷನ್ ನೀಡುವಲ್ಲಿ ವಿಳಂಬಕ್ಕೆ ಕಾರಣ ಸಿ.ಆರ್ಸ್.